# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ/ಸಹಾಯಕ ಅಭಿಯಂತರ ರವರ ಕಛೇರಿ, 14ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ ಬೆಂಗಳೂರು-560102.

ಸಂಖ್ಯೆ:ಸ.ಅ/ವಾ-174/ಹೆಚ್ಎಸ್ಆರ್/ಪಿಆರ್/ /2022-23 ದಿನಾಂಕ: 15.07.2022.

## ಸಭಾ ಸೂಚನಾ ಪತ್ರ

**ವಿಷಯ** ಹೆಚ್.ಎಸ್.ಆರ್ ಬಡಾವಣೆ, ವಾರ್ಡ್ ಸಂಖ್ಯೆ: 174, ವಾರ್ಡ್ ಸಮಿತಿ ಸಭೆಯನ್ನು ಕರೆಯುವ ಬಗ್ಗೆ.

**ಉಲ್ಲೇಖ:** 1. ಮಾನ್ಯ ಮುಖ್ಯ ಆಯುಕ್ತರು ಬಿಬಿಎಂಪಿ ರವರ ಪರಿಷ್ಕೃತ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)ಪಿ.ಆರ್/35/2020-21, ದಿನಾಂಕ: 04.04.2022

2. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಪತ್ರ ಸಂಖ್ಯೆ: ವ.ಆ (ಬೊ)/ಪಿ.ಆರ್/364/2022-23, ದಿನಾಂಕ: 01.07.2022.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕರಿಗೆ ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಉಲ್ಲೇಖ (1)ರಲ್ಲಿ ಮಾನ್ಯ ಮುಖ್ಯ ಆಯುಕ್ತರು ಬಿಬಿಎಂಪಿ ರವರ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ವಾರ್ಡ್‌ಗೆ ಒಬ್ಬ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ಕೆಲವು ವಾರ್ಡ್‌ಗಳಿಗೆ ಅಧಿಕಾರಿಯಾಗಿ ನೇಮಿಸಲಾಗಿದ್ದ ಅಧಿಕಾರಿಗಳು ನಿವೃತ್ತಿಹೊಂದಿದ್ದು, ಕೆಲವು ಅಧಿಕಾರಿಗಳು ವರ್ಗಾವಣೆ ಹೊಂದಿರುವುದರಿಂದ ಉಲ್ಲೇಖ (2)ರಂತೆ ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರು ವಾರ್ಡ್ ಸಂಖ್ಯೆ: 174 ಹೆಚ್.ಎಸ್.ಆರ್ ಬಡಾವಣೆ, ವಾರ್ಡ್‌ಗೆ ಶ್ರೀಮತಿ ವಿಜಯಲಕ್ಷ್ಮಿ, ಕಂದಾಯ ಅಧಿಕಾರಿ (ಬೊವ) ರವರನ್ನು ನೇಮಿಸಲಾಗಿದ್ದು, ಅದರಂತೆ ವಾರ್ಡ್ ಸಮಿತಿ ಸಭೆಯನ್ನು ಬಿಬಿಎಂಪಿ ಉಪವಿಭಾಗದ ಕಛೇರಿ 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು-560102 ರಲ್ಲಿ ದಿನಾಂಕ: 20.07.2022 ಬುಧುವಾರ ರಂದು ಸಮಯ ಬೆಳಿಗ್ಗೆ: 11:00 ಘಂಟೆಗೆ ನಿಂಯೋಜಿಸಲಾಗಿದೆ.

ಆದ್ದರಿಂದ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ವಾರ್ಡ್ ಸಮಿತಿಗೆ ಆಯ್ಕೆಯಾಗಿರುವ ವಾರ್ಡ್ ಸದಸ್ಯರು, ಸಕಾಲದಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶ್ವಸಿಗೊಳಿಸಲು ಕೋರಿದೆ.

**-:ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳು:-**

1. ಹಿಂದಿನ ಸಭೆಯಲಿ ಚರ್ಚಿಸಲಾದ ವಿಷಯಗಳು ಹಾಗೂ ದೂರುಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ವರದಿ ಮಾಡುವುದು.
2. ಘನತ್ಯಾಜ್ಯ ನಿರ್ವಹಣೆ ಮತ್ತು ನಾಗರೀಕರ ಕುಂದುಕೊರತೆಗಳ ಚರ್ಚೆ ಹಾಗೂ ನೋಡಲ್ ಅಧಿಕಾರಿಗಳ ಆದೇಶದ ಮೇರೆಗೆ ಇತರೆ ಚರ್ಚೆ.
3. ವಾರ್ಡ್ ರಸ್ತೆಗಳ ನಿರ್ವಹಣೆ ಬಗ್ಗೆ.
4. ಮಳೆಗಾಲದಲ್ಲಿ ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿರುವ ಕಾಮಗಾರಿಗಳ ಬಗ್ಗೆ.
5. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಚರ್ಚೆ.
6. ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ಮರಗಳ ತೆರವುಗೊಳಿಸುವ ಮತ್ತು ಮುಂಜಾಗ್ರತ ಬಗ್ಗೆ ಚರ್ಚೆ.
7. ವಾರ್ಡ್ ವ್ಯಾಪ್ತಿಯಲ್ಲಿನ ಉದ್ಯಾನವನಗಳ ನಿರ್ವಹಣೆ ಬಗ್ಗೆ
8. ವಾರ್ಡ್‌ಗಳಲ್ಲಿ ಜರುಗುವ ಕಾಮಗಾರಿಗಳ ಬಗ್ಗೆ.
9. ತೆರಿಗೆ ವಸೂಲಾತಿ ಕುರಿತು ಚರ್ಚಿಸುವ ಬಗ್ಗೆ.
10. ಅನಧಿಕೃತ ಫ್ಲೆಕ್ಸ್ / ಬ್ಯಾನರ್ ತೆರವುಗೊಳಿಸಲು ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ.
11. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ/ ಮಳೆ ನೀರಿನ ಸಮಸ್ಯೆ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಬೆಸ್ಕಾಂ, ಕೈಗೆತ್ತಿಕೊಂಡಿರುವ ಕಾಮಗಾರಿಗಳ ಚರ್ಚೆ.
12. ಕೋವಿಡ್-19 ಸಾಂಕ್ರಮಿಕ ರೋಗದ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳ ಬಗ್ಗೆ
13. ಇತರೆ ವಿಚಾರಗಳು.

Scanned with CamScanner

<u>ಪ್ರತಿಗಳನ್ನು:</u>

1. ಮಾನ್ಯ ಮುಖ್ಯ ಆಯುಕ್ತರು ರವರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಕೌನ್ಸಿಲ್ ಕಾರ್ಯದರ್ಶಿ ರವರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4. ಮಾನ್ಯ ವಲಯ ಉಸ್ತುವಾರಿ ಆಯಕ್ತರು (ಬೊ.ವ.) ರವರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ಬೊ.ವ.) ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
6. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
7. ಅರಣ್ಯ ಅಧಿಕಾರಿಗಳು, ಬೊಮ್ಮನಹಳ್ಳಿ ವಲಯ, ಅರಣ್ಯ ಇಲಾಖೆ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಲೆಕ್ಟ್ರಿಕಲ್ ಬೊಮ್ಮನಹಳ್ಳಿ ವಿಭಾಗ, ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
9. ಸಹಾಯಕ ಕಂದಾಯ ಅಧಿಕಾರಿಗಳು, ಹೆಚ್.ಎಸ್.ಆರ್ ಉಪವಿಭಾಗರ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ..
10. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಜಯನಗರ, ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
11. ಸಹಾಯಕ ನಿರ್ದೇಶಕರು, ಪಶುಪಾಲನಾ ಬೊಮ್ಮನಹಳ್ಳಿ ವಲಯ, ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
12. ಕಾರ್ಯಪಾಲಕ ಅಭಿಯಂತರರು, ಕೆರೆ ವಿಭಾಗ, ಬಿ.ಬಿ.ಎಂ.ಪಿ. ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ..
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪವಿಭಾಗ ಬಿ.ಟಿ.ಎಂ./ಬೊಮ್ಮನಹಳ್ಳಿ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ..
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
15. ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ 174 ಹೆಚ್.ಎಸ್.ಆರ್ ಬಡಾವಣೆ ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
16. ಆರಕ್ಷಕ ನಿರೀಕ್ಷಕರು, ಕಾನೂನು ಸುವ್ಯವಸ್ಥೆ ಹೆಚ್.ಎಸ್.ಆರ್, ಪೋಲಿಸ್ ಠಾಣೆ ಮತ್ತು ಸಂಚಾರಿ ಪೋಲಿಸ್ ಠಾಣೆ ಇಬ್ಬಲೂರು ರವರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
17. ವೈದ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ, ಅಗರ.
18. ವಾರ್ಡ್ ಸಮಿತಿ ಸದಸ್ಯರಿಗೆ ಸಭೆಯಲ್ಲಿ ಭಾಗವಹಿಸಲು ಸಲ್ಲಿಸಿದೆ.
19. ಸಾರ್ವಜನಿಕ ಮಾಹಿತಿಗಾಗಿ ಕಛೇರಿಯ ಸೂಚನ ಫಲಕಕ್ಕೆ.
20. ಕಛೇರಿಯ ಪ್ರತಿ.

N. Rajagopalababu

ಕಾರ್ಯದರ್ಶಿ/ಸಹಾಯಕ ಅಭಿಯಂತರರು

ವಾರ್ಡ್ ಸಂಖ್ಯೆ: ನಂ.174 ಹೆಚ್.ಎಸ್.ಆರ್ ಬಡಾವಣೆ

R. Vijaya 16/7/22

ಶ್ರೀಮತಿ ವಿಜಯಲಕ್ಷ್ಮಿ

ಕಂದಾಯ ಅಧಿಕಾರಿ (ಪ್ರ.ನಿ.) ಹಾಗೂ

ನೋಡೆಲ್ ಅಧಿಕಾರಿ,

ವಾರ್ಡ್ ಸಂಖ್ಯೆ: 174, ಹೆಚ್.ಎಸ್.ಆರ್ ಬಡಾವಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.